ಅ) ಈ ವಾಣಿಜ್ಯ ಸಂಸ್ಥೆಗಳ ಮೇಲೆ ಸರ್ಕಾರದವರು ಯಾವುದಾದರೂ ರೂಪದಲ್ಲಿ ನಿಯಂತ್ರಣ ಹೊಂದಲಂ ಪ್ರಯತ್ನಿಸುವರೆ ?

ಶ್ರೀ ಜೀವರಾಜ್ ಆಳ್ವ (ಉನ್ನತ ಶಿಕ್ಷಣ ಮಂತ್ರಿಗಳು).—

ಅ) ಇಲಾಖೆ ನಿಗದಿ ಪಡಿಸಿರುವ ಮಾಸಿಕ ಶುಲ್ಕಕ್ಕಿಂತಲೂ ಹೆಚ್ಚಿಗೆ ವಸೂಲಿ ಮಾಡಿದ ಒಂದು ಪ್ರಕರಣವು ಇಲಾಖೆಯ ಗಮನಕ್ಕೆ ಬಂದಿತ್ತು. ಅಂಥಹ ವಾಣಿಜ್ಯ ಶಾಲೆಯ ವಿರುದ್ಧ ಕ್ರಮ ತೆಗೆದು ಕೊಂಡು ಹೆಚ್ಚಿಗೆ ವಸೂಲಿ ಮಾಡಿದ್ದ ಮಾಸಿಕ ಶುಲ್ಕವನ್ನು ವಿದ್ಯಾರ್ಥಿಗಳಿಗೆ ವಾಪಸ್ಸು ಕೊಡಿಸಲಾಗಿದೆ. ಶಿಕ್ಷಕರ ಶೋಷಣೆ ಬಗ್ಗೆ ಇಲಾಖೆಯ ಗಮನಕ್ಕೆ ಬಂದಿರುವುದಿಲ್ಲ.

ಆ) ಈ ಎಲ್ಲಾ ವಾಣಿಜ್ಯ ಶಾಲೆಗಳ ಮೇಲೂ ಸರ್ಕಾರದ ಪರಿಣಾಮಕಾರಿ ನಿಯಂತ್ರಣ ಇರುತ್ತದೆ.

ನಂದಿಹಳ್ಳಿ ಸ್ನಾತಕೋತ್ತರ ಕೇಂದ್ರದಲ್ಲಿ ಹಣದ ದುರುಪಯೋಗ

೮೦೩. ಶ್ರೀ ಯು. ಭೂಪತಿ(ಸಂಡೂರು).—ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ನಂದಿ ಹಳ್ಳಿ ಸ್ನಾತಕೋತ್ತರ ಕೇಂದ್ರದಲ್ಲಿ ಹಿಂದಿನ ನಿರ್ದೇಶಕರವರಿಂದ ಹಣದ ದುರುಪಯೋಗವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ? ಹಾಗಿದ್ದಲ್ಲಿ ದುರುಪಯೋಗವಾದ ಹಣದ ಮೊತ್ತವೆಷ್ಟು ?

ಆ) ಹಣ ದುರುಪಯೋಗದ ಬಗ್ಗೆ ತನಿಖೆ ಅಥವಾ ವಿಚಾರಣೆ ನಡೆಸಲಾಗಿದೆಯೆ ? ಹಾಗಿದ್ದಲ್ಲಿ ಅದರ ಫಲಿತಾಂಶವೇನು ?

ಇ) ಹಾಲಿ ಖಾಲಿ ಇರುವ ನಿರ್ದೇಶಕರ ಹುದ್ದೆಗೆ ಬೇರೆಯವರನ್ನು ನೇಮಿಸುವುದಾಗಿ ಈ ಹಿಂದೆ ಸರ್ಕಾರ ಕೊಟ್ಟ ಆಶ್ವಾಸನೆ ಜಾರಿಗೆ ಬರದಿರಲು ಕಾರಣಗಳೇನು ?

ಈ) ಈ ಹುದ್ದೆಯನ್ನು ಯಾವಾಗ ಭರ್ತಿ ಮಾಡಲಾಗುವುದು ?

ಶ್ರೀ ಜೀವರಾಜ ಆಳ್ವ (ಮಾನ್ಯ ಉನ್ನತ ಶಿಕ್ಷಣ ಸಚಿವರು).—

ಅ) ಹೌದು. ಅಂದಾಜು ರೂ. ೧೬,೭೪,೬೨೫-೦೦

ಆ) ಹೌದು.

ನಿರ್ದೇಶಕರನ್ನು ಅಮಾನತ್ತಿನಲ್ಲಿ ಇಡಲಾಗಿದೆ.

ಪ್ರಕರಣವನ್ನು ಸಿ. ಒ. ಡಿ. ತನಿಖೆಗೆ ಒಪ್ಪಿಸಲಾಗಿದೆ. ಅವರ ವರದಿಯನ್ನು ನಿರೀಕ್ಷಿಸಲಾಗಿದೆ.

ಇ) ಈಗ ಖಾಲಿ ಇರುವ ನಿರ್ದೇಶಕರ ಹುದ್ದೆಗೆ ಪ್ರಭಾರ ವ್ಯವಸ್ಥೆ ಮಾಡಲಾಗಿದೆ.

ಈ) ಶೀಘ್ರದಲ್ಲೇ ಭರ್ತಿ ಮಾಡಲಾಗುವುದು.

ಉತ್ತರ ಕನ್ನಡ ಜಿಲ್ಲೆಯಲ್ಲಿ ಹಳ್ಳಿ ಹೆದ್ದಾರಿ ಯೋಜನೆ.

೫೯೦. ಶ್ರೀ ಆರ್. ಎನ್. ನಾಯಕ್ (ಭಟ್ಕಳ್).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಹಳ್ಳಿ ಹೆದ್ದಾರಿ ಯೋಜನೆಯಡಿಯಲ್ಲಿ ಎಷ್ಟು ಕಡೆ ಕೆಲಸವನ್ನು ಪ್ರಾರಂಭಿಸಿ, ಎಷ್ಟು ಕಡೆ ಮುಕ್ತಾಯವಾಗಿದೆ ?